**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 461/2022 |
| ಸಿ.ಡಬ್ಲ್ಯೂ | 1 |
| ಪಿ.ಡಬ್ಲ್ಯೂ | 1 |

| | | |
|---|---|---|
| ಹೆಸರು | :- | ಶಕುಂತಲಾ ಶೆಟ್ಟರ |
| ಗಂಡನ/ತಂದೆ ಹೆಸರು | :- | ರಾಚ್ಚಪ್ಪ |
| ವಯಸ್ಸು | :- | 77 ವರ್ಷ |
| ಉದ್ಯೋಗ | :- | ಗೃಹಣಿ |
| ವಾಸಸ್ಥಳ | :- | ಮುಧೋಳ |

ಸಾಕ್ಷಿಯನ್ನು ದಿಃ 14.09.2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

1. ನನ್ನ ಸ್ವಂತ ಊರು ಶಿರೂರ, ನಾನು ಕಳೆದ 15 ವರ್ಷಗಳಿಂದ ಆನಂದ ನಗರ ಮುಧೋಳದಲ್ಲಿ ವಾಸಿಸುತ್ತಿದ್ದೇನೆ. ನನ್ನ ಗಂಡ ಸಿವ್ಹಿಲ್ ಇಂಜನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ನನ್ನ ಮಗ ಮೃತನಾಗಿದ್ದು, ಮಗಳು ಬೆಂಗಳೂರಿನಲ್ಲಿ ವಾಸವಾಗಿದ್ದಾಳೆ. ಈಗ 6 ತಿಂಗಳ ಹಿಂದೆ ಮಾರ್ಚ ತಿಂಗಳಿನಲ್ಲಿ ಹಾಲಿನವನು ಬರುತ್ತಾನೆ ಎಂದು ಕಂಪೌಂಡ ಗೇಟನ್ನು ತೆಗೆದು ಒಳಗಡೆ ಹೋಗಿದ್ದೆನು. ನನ್ನ ಗಂಡ ಇನಕಮ್ ಟ್ಯಾಕ್ಸನ ಕೆಲಸ ಮಾಡಿಕೊಳ್ಳುತ್ತಾ, ಮನೆ ಹಾಲನಲ್ಲಿ ಕುಳಿತ್ತಿದ್ದರು. ಆಗ ನಾನು ಅಡುಗೆ ಮನೆಯಲ್ಲಿ ಇದ್ದೆನು. ಒಮ್ಮೆಲೆ ಗೇಟ ಶಬ್ದ ಆಗಿದ್ದು ಕೇಳಿ ಬಂತು. ಆಗ ಒಬ್ಬ ವ್ಯಕ್ತಿ ಅಡುಗೆ ಮನೆ ಬೋಲ್ಟ ಹಾಕಿದ್ದು ಕೇಳಿ ಬಂದಿತ್ತು. ಆತ ಕುತ್ತಿಗೆಗೆ ಕೊಯತಾ ಇಟ್ಟು ನನ್ನ ಬಾಯಿಯನ್ನು ಮುಚ್ಚಿದನು. ನಾನು ಬಿಡಿಸಿಕೊಳ್ಳಲು ಪ್ರಯತ್ನಿಸಿದರು ಸಫಲವಾಗಲಿಲ್ಲ. ನನ್ನನ್ನು ಹಿಡಿದುಕೊಂಡ ವ್ಯಕ್ತಿ ನನ್ನ ಬಳಿ ಇದ್ದ ಬಂಗಾರವನ್ನು ಕೊಡಲು ಕೇಳಿದನು. ನನ್ನ ಬಳಿ ಇದ್ದ 45 ಗ್ರಾಂನ ಬಿಲ್ವರಗಳನ್ನು, ಮೂರೂವರೆ ತೊಲೆ ಬಂಗಾರದ ಮಂಗಳಸೂತ್ರ, 2 ತೊಲೆ ರುದ್ರಾಕ್ಷಿ ಸರ, 2 ಉಂಗುರ ತಲಾ 5 ಗ್ರಾಂ ತೆಗೆದು ಇಟ್ಟೆನು. ನನ್ನ ಗಂಡನ ಹತ್ತಿರ ಮತ್ತೊಬ್ಬ ವ್ಯಕ್ತಿ ಹೋಗಿದ್ದು, ಆತ ನನ್ನ ಗಂಡನ ಕುತ್ತಿಗೆಗೆ ಕೊಯತಾ ಇತ್ತು ಅವರ ಕೊರಳಲ್ಲಿ ಇದ್ದ 2 ತೊಲೆ ಅವಲಕ್ಕಿ ಚೈನನ್ನು ಹಾಗೂ 25 ಗ್ರಾಂನ ಬಂಗಾರದ ಗುಂಡು ಗಡಿಗೆಯನ್ನು ಹಾಗೂ ಒಂದು ಬಿಳಿ ಹರಳಿನ ಉಂಗುರ ಹಾಗೂ ಮತ್ತೊಂದು ನನ್ನ ಗಂಡನ ಹೆಸರಿದ್ದ ಉಂಗುರಗಳನ್ನು ಕಿತ್ತುಕೊಂಡನು. ನಂತರ ಹೋಗಬೇಕಾದರೆ ಅಡುಗೆ ಮನೆಯಿಂದ ಹೊರಗಡೆ ಚೀಲಕ ಹಾಕಿದನು. ನಂತರ ಮಲಗುವ ಕೋಣೆಗೆ ಹೋಗಿ ಅಲ್ಲಿ ಬಟ್ಟೆ ಬರೆ ಇದ್ದ ಕಪಾಟಿನ ಬೀಗವನ್ನು ಮುರಿದನು. ಹಾಗೂ ಬಟ್ಟೆ ಬರೆಗಳನ್ನು ಕಿತ್ತು ಹಾಕಿದನು. ನನ್ನ ಗಂಡನಿಗೆ

ನಗದು ಹಣವನ್ನು ನೀಡಲು ಕೇಳಿದಾಗ ಬ್ಯಾಂಕಿಗೆ ಬಂದು ಹಣ ಪಡೆಯಲು ಹೇಳಿದರು. ನಂತರ ಮನೆಯ ಮುಖ್ಯ ದ್ವಾರವನ್ನು ಹೊರಗಿನಿಂದ ಚೀಲಕ ಹಾಕಿ ಹೋಗಿರುತ್ತಾರೆ. ನನ್ನ ಗಂಡ ಕೂಗಾಡಿದಾಗ ಅದನ್ನು ಕೇಳಿ ಚಾಸಾ-13 ಶ್ರೀಕಾಂತ ಹೂಗಾರ ಹಾಗೂ ಇನ್ನಿತರ 50 ರಿಂದ 60 ಜನ ಕೂಡಿದರು. ಆಗ ಕುಂಚನೂರ ಎನ್ನುವ ವ್ಯಕ್ತಿಯ ತಂಗಿ ಹಾಲು ನೀಡಲು ಬಂದಳು. ನಂತರ ನಮ್ಮ ಮಗಳಿಗೆ ಪೋನ ಮಾಡಿ ವಿಷಯ ತಿಳಿಸಿದಾಗ ಆಕೆ ಬೆಂಗಳೂರಿನಿಂದ ಬಂದಳು. ನಂತರ ಪೊಲೀಸ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿದೆವು. ಸಾಕ್ಷಿಗೆ ಈಗ ದೂರನ್ನು ತೋರಿಸಿತ್ತಿದ್ದು, ಅದರ ಮೇಲೆ ಇರುವ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸದರಿ ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರು ನೀಡಿದ 2 ತಿಂಗಳ ನಂತರ ಪೊಲೀಸರು ಕರೆ ಮಾಡಿ ಆರೋಪಿತರು ಸಿಕ್ಕಿದ್ದಾರೆ ಎಂದು ತಿಳಿಸಿದ್ದು, ಆರೋಪಿತರನ್ನು ಗುರುತಿಸಲು ಜಮಖಂಡಿ ಜೈಲಿಗೆ ಹೋಗಿದ್ದೆವು. ಅದರಲ್ಲಿ ಒಬ್ಬ ವಿಠ್ಠಲ ಎಂಬ ವ್ಯಕ್ತಿಯನ್ನು ನಾನು ಗುರುತಿಸುತ್ತೇನೆ. ನನ್ನ ಗಂಡ ಒಬ್ಬ ವ್ಯಕ್ತಿಯನ್ನು ಅಂದಾಜು ಗುರುತಿಸುತ್ತಾರೆ. ಸಾಕ್ಷಿಗೆ ಈಗ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ತೋರಿಸಿದ್ದು ಅವರನ್ನು ಸಾಕ್ಷಿಯು ಗುರುತಿಸಿರುವುದಿಲ್ಲ. ಸಾಕ್ಷಿಗೆ ಈಗ ಒಂದು ಕಬ್ಬಿನದ ಮಚ್ಚನ್ನು ತೋರಿಸುತ್ತಿದ್ದು, ಅದನ್ನು ಸಾಕ್ಷಿಯು ಗುರುತಿಸುತ್ತಾರೆ. ಸದರಿ ಮಚ್ಚನ್ನು ಮು.ಮಾ-1 ಎಂದು ಗುರುತಿಲಾಯಿತು. ಸಾಕ್ಷಿಗೆ ಈಗ ಅವರ ಗಂಡನಿಗೆ ಹಿಡಿದ ಚಾಕುವನ್ನು ಗುರುತಿಸಲು ಸಾಧ್ಯವೇ ಎಂದು ಕೇಳಿದಾಗ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿಗೆ ಈಗ 3 ಛಾಯಾಚಿತ್ರಗಳನ್ನು ತೋರಿಸುತ್ತಿದ್ದು, ಸದರಿ ಛಾಯಾಚಿತ್ರಗಳಲ್ಲಿ ಚಕ್ಸ ಶರ್ಟ ಹಾಕಿಕೊಂಡ ವ್ಯಕ್ತಿ ನಮ್ಮ ಮನೆಗೆ ನೀರು ಹಾಕಲು ಬರುತ್ತಿದ್ದ ಎಂದು ಗುರುತಿಸುತ್ತಾರೆ. ಸಾಕ್ಷಿಯು ಮುಂದುವರೆದು ಸದರಿ ವ್ಯಕ್ತಿ ನ್ಯಾಯಾಲಯದ ಮುಂದೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ 2 ಛಾಯಾಚಿತ್ರಗಳನ್ನು ತೋರಿಸುತ್ತಿದ್ದು, ಸದರಿ ಛಾಯಚಿತ್ರ ತನ್ನ ಮನೆಯ ಮುಂದೆ ಮತ್ತು ಒಳಗಡೆ ತೆಗೆದಿದ್ದು ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಎರಡು ಛಾಯಾಚಿತ್ರಗಳಲ್ಲಿ ಚಾಸಾ-2 ಮತ್ತು ಚಾಸಾ-3 ರವರು ಹಾಜರ ಇರುತ್ತಾರೆ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಣಿಸಿ ಮಾನ್ಯ ಸ.ಸ.ಅ ರವರು ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದರಿಂದ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)**

**ಪಾಟೀ ಸವಾಲು : ಶ್ರೀ.ಸ.ಸ.ಅ ರವರಿಂದ**

1. ನಮ್ಮ ಮನೆಯಲ್ಲಿ ದಿಃ06.03.2022 ರಂದು ಕಳ್ಳತನ ಆಗಿತ್ತು ಎಂದರೆ ಸರಿ. ದಿಃ07.03.2022 ರಂದು ಪೊಲೀಸರು ನಿಮ್ಮ ಮನೆಯ ಮುಂದೆ ಪಂಚನಾಮೆ ಮಾಡಿದರು

ಎಂದರೆ ಸರಿ. ಆ ಸಮಯದಲ್ಲಿ ಚಾಸಾ-2 ಮತ್ತು 3 ರವರು ಪಂಚರಾಗಿ ಹಾಜರ ಇದ್ದರು ಎಂದರೆ ಸರಿ. ಕಳ್ಳತನವಾದ ಮನೆ ಮತ್ತು ನಮ್ಮ ಅಡುಗೆಮನೆಯನ್ನು ನಾನು ಪಂಚರಿಗೆ ಮತ್ತು ಪೊಲೀಸರಿಗೆ ತೋರಿಸಿದೆ. ಪಂಚರ ಸಮಕ್ಷಮ ಪಂಚನಾಮೆ ಮಾಡಿದರು ಎಂದರೆ ಸರಿ. ದಿಃ01.09.2022 ರಂದು ಪೊಲೀಸರು ಆರೋಪಿತರನ್ನು ಗುರುತಿಸಲು ನಿಮ್ಮನ್ನು ಕರೆದರು ಎಂದರೆ ಸರಿ. ನಿಮ್ಮ ಮನೆಗೆ ಸದಾಶಿವ ಕುಂಚನೂರ ಹಾಲು ಹಾಕಲು ಬರುತ್ತಿದ್ದು, ಆತನೊಂದಿಗೆ 1 ನೇ ಆರೋಪಿತ ವಿಠ್ಠಲ ಈತ ಸಹ ಬರುತ್ತಿದ್ದ ಎಂದು ಪೊಲೀಸರು ತೋರಿಸಿದರು ಎಂದರೆ ಸರಿ. ಈಗ ನ್ಯಾಯಾಲಯದ ಮುಂದಿರುವ ಆರೋಪಿತನೆ ಸದರಿ ವಿಠ್ಠಲ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ.ಪಿ.ಎಮ್.ವಿ ವಕೀಲರಿಂದ 1 ನೇ ಆರೋಪಿ ಪರವಾಗಿ**

1. ನೀವು ಖಾಯಂ ಆಗಿ ನಿಮ್ಮ ಮಗಳು ನಂದಾರವರೊಂದಿಗೆ ಬೆಂಗಳೂರಿನಲ್ಲಿ ವಾಸಿಸುತ್ತೀರಿ ಎಂದರೆ ಸಾಕ್ಷಿ ಹೆಚ್ಚಾಗಿ ಅಲ್ಲಿಯೇ ವಾಸಿಸುತ್ತೇನೆ ಎಂದು ಹೇಳುತ್ತಾರೆ. ನಿಮ್ಮ ಎಲ್ಲಾ ಆಭರಣಗಳು ಬ್ಯಾಂಕ ಲಾಕರನಲ್ಲಿ ಇರುತ್ತವೆ ಎಂದರೆ ಮದುವೆ ಇದ್ದ ಕಾರಣ ನನ್ನ ಬಳಿ ಇದ್ದವು ಎಂದು ಸಾಕ್ಷಿ ನುಡಿಯುತ್ತಾರೆ. ಮುಮಾ-1 ಮತ್ತು ಮುಮಾ-2 ನ್ನು ನೀವು ಈ ಮೊದಲು ನೋಡಿಲ್ಲ ಎಂದರೆ ಮುಮಾ-1 ನ್ನು ಟೆಂಗಿನಕಾಯಿ ಸುಲಿಯುವಾಗ ನೋಡಿದ್ದೆ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ನನಗೆ ಕುತ್ತಿಗೆಗೆ ಅದನ್ನು ಹಾಕಿದ್ದರು ಎಂದು ಹೇಳುತ್ತಾರೆ. ಚೆನ್ನಾಗಿ ರಕ್ತ ಬಂದಿತ್ತು. ನಾನು ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. ಪಂಚನಾಮೆಗೆ ನಾನು ಹೋಗಿಲ್ಲ. ದೂರು ನೀಡಲು ನೀವು ಪೊಲೀಸ ಠಾಣೆಗೆ ಹೋಗಿಲ್ಲ ಎಂದರೆ ಬೇರೆಯವರು ಹೋಗಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ನಮ್ಮ ಮನೆಯಲ್ಲಿ ಬಂಗಾರದ ಆಭರಣಗಳು ಕಳ್ಳತನವಾದವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ06.03.2022 ರಂದು ನಾನು ನನ್ನ ಮಗಳ ಮನೆಯಲ್ಲಿ ಇದ್ದೆ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ .

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ